**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ**
**ರಾಷ್ಟ್ರೀಯಾ ಸೇವಾ ಯೋಜನೆ**

ಸಂ:ಡಿಟಿಇ/ಎನ್‌ಎಸ್‌ಎಸ್/02/ಐಡಿಪಿ/2016-17

ಸಂಯೋಜನಾಧಿಕಾರಿ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01,
ದಿನಾಂಕ: 14-02-2017

**ಜ್ಞಾಪನ**

ವಿಷಯ: "ಅಂಬೇಡ್ಕರ್ ಜ್ಞಾನ ದರ್ಶನ ಅಭಿಯಾನ" ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಎನ್.ಎಸ್.ಎಸ್. ಸ್ವಯಂಸೇವಕರನ್ನು ನಿಯೋಜಿಸುವ ಬಗ್ಗೆ.
ಉಲ್ಲೇಖ: ರಾಜ್ಯ ಸಂಪರ್ಕಾಧಿಕಾರಿಯವರ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/ಸಾಮಾನ್ಯ/ 2016-17/**391** ದಿನಾಂಕ: 09.02.2017

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರವು ಡಾ|| ಬಿ.ಆರ್.ಅಂಬೇಡ್ಕರ್ ಅವರ 125ನೇ ಜನ್ಮ ದಿನೋತ್ಸವದ ಅಂಗವಾಗಿ 3 ದಿನಗಳ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಹಮ್ಮಿಕೊಳ್ಳಲು ನಿರ್ಧರಿಸಿದೆ. ಅದರ ಭಾಗವಾಗಿ "ಅಂಬೇಡ್ಕರ್ ಜ್ಞಾನ ದರ್ಶನ ಅಭಿಯಾನ" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಂವಿಧಾನ ಶಿಲ್ಪಿ ಡಾ|| ಬಿ.ಆರ್ ಅಂಬೇಡ್ಕರ್‌ರವರ ಜೀವನ ಮತ್ತು ಸಿದ್ಧಾಂತಗಳನ್ನು ವಿದ್ಯಾರ್ಥಿ ಸಮುದಾಯಕ್ಕೆ ತಲುಪಿಸುವುದು ಈ ಅಭಿಯಾನದ ಉದ್ದೇಶವಾಗಿದೆ.

ಈ ಅಭಿಯಾನವನ್ನು ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಲಿದ್ದಾರೆ, ಕರ್ನಾಟಕ ಸರ್ಕಾರದ ಹಲವು ಸಚಿವರು ಮತ್ತು ಡಾ|| ಅಂಬೇಡ್ಕರ್ ಸಿದ್ಧಾಂತದ ಕುರಿತಾದ ಸಂಪನ್ಮೂಲ ವ್ಯಕ್ತಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಸಮಾರಂಭವು ದಿನಾಂಕ 16.02.2017ರಂದು ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಬೆಂಗಳೂರು ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ 'ಜ್ಞಾನಜ್ಯೋತಿ ಸಭಾಂಗಣ'ದಲ್ಲಿ ನಡೆಯಲಿದೆ. ಮದ್ಯಾಹ್ನ 1.00 ಗಂಟೆಯಿಂದ ಸ್ವಯಂಸೇವಕರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಸದರಿ ಕಾರ್ಯಕ್ರಮಕ್ಕೆ ಈ ಕೆಳಕಂಡ ಸ್ಥಳಿಯ ಪಾಲಿಟೆಕ್ನಿಕ್ ಸಂಸ್ಥೆಯಿಂದ ಸ್ವಯಂಸೇವಕರನ್ನು ಒಬ್ಬ ಕಾರ್ಯಕ್ರಮಾಧಿಕಾರಿ ಭಾಗವಹಿಸಲು ಸೂಚಿಸಲಾಗಿದೆ.

| ಕ್ರ.ಸಂ | ಪಾಲಿಟೆಕ್ನಿಕ್ ಹೆಸರು | ಸ್ವಯಂ ಸೇವಕ / ಸ್ವಯಂ ಸೇವಕಿ | ಕಾರ್ಯಕ್ರಮಾಧಿಕಾರಿ |
|---|---|---|---|
| 1. | ಎಸ್.ಜೆ (ಸರ್ಕಾರಿ) ಪಾಲಿಟೆಕ್ನಿಕ್, ಬೆಂಗಳೂರು | 75 | 01 |
| 2. | ಜಿ.ಆರ್.ಐ.ಸಿ.ಪಿ ಸರ್ಕಾರಿ ಪಾಲಿಟೆಕ್ನಿಕ್. ಬೆಂಗಳೂರು | 75 | - |
| 3. | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ, ಬೆಂಗಳೂರು | 50 | - |

ನಿರ್ದೇಶಕರು

1. ರಾಜ್ಯ ಸಂಪರ್ಕಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ(ಎನ್‌ಎಸ್‌ಎಸ್) ಯುವಜನ ಸೇವಾಇಲಾಖೆ ಬೆಂಗಳೂರು-01
2. ಪ್ರಾದೇಶಿಕ ನಿರ್ದೇಶಕರು, ಎನ್ ಎಸ್ ಎಸ್ ಪ್ರಾದೇಶಿಕ ಕೇಂದ್ರ, # 57/190.ಆರ್‌ವಿ.ರೋಡ್ ಬಸವನಗುಡಿ ಬೆಂಗಳೂರು-04
3. ಇ-ಆಡಳಿತ ವೆಬ್‌ಸೈಟಿನಲ್ಲಿ ಪ್ರಕಟಿಸಲು
4. ಕಛೇರಿ ಪ್ರತಿ